ಮಾಡಲು ಹಾಗೂ ಶ್ರೀ ಅಭಯ್ ಪಾಟೀಲ್ ಮತ್ತು ಶ್ರೀ ಶಾಮಾ ಭೀಮಾ ಘಾಟಗೆ ಅವರಿಗೆ ಶ್ರೀ ಕಿರಣ್ ಠಾಕೂರ್ ಅವರು ಬಹಿರಂಗವಾಗಿ ಕ್ಷಮೆ ಯಾಚಿಸಬೇಕೆಂದು ಈ ಸದನಕ್ಕೆ ತೀರ್ಮಾನಿಸುತ್ತದೆ"

ಪ್ರಸ್ತಾವದ ಪರವಾಗಿರುವವರು 'ಹೌದು' ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು 'ಇಲ್ಲ' ಎಂದು ಸೂಚಿಸಬೇಕು

ಪ್ರಸ್ತಾವವು 'ಹೌದು' ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು 'ಹೌದು' ಎನ್ನುವವರ ಪರವಾಗಿದೆ

ಪ್ರಸ್ತಾವವು 'ಹೌದು' ಎನ್ನುವವರ ಪರಿವಾಗಿದೆ

ಪ್ರಸ್ತಾವವು 'ಹೌದು' ಎನ್ನುವವರ ಪರವಾಗಿದೆ

ಪ್ರಸ್ತಾವವು **ಸರ್ವಾನುಮತದಿಂದ ಅಂಗೀಕೃತವಾಗಿದೆ**

ಸಂಪಾದಕರಾದ ಶ್ರೀ ಕಿರಣ್ ಠಾಕೂರ್ ಅವರನ್ನು ದಿನಾಂಕ 30–07–2012ರ ಸೋಮವಾರದಂದು ಬೆಳಿಗ್ಗೆ 10 ಗಂಟೆಗೆ ಸದನದ ಮುಂದೆ ಹಾಜರಾಗಲು ಸೂಚನೆ ನೀಡುವಲ್ಲಿ ಸದನದ ಅಭಿಪ್ರಾಯವನ್ನು ತೋರುತ್ತೇನೆ.

ಸದನದ ಸಹಮತಿ ಇದಕ್ಕೆ ದೊರಕಿದೆ ಎಂದು ಭಾವಿಸುತ್ತೇನೆ.

ಈಗ ಸದನವನ್ನು ಮಧ್ಯಾಹ್ನ 3 ಗಂಟೆಗೆ ಸೇರುವಂತೆ ಮುಂದೂಡಸಲಾಗಿದೆ.

(ಸದನವನ್ನು ಮಧ್ಯಾಹ್ನ 1.51 ಗಂಟೆಗೆ ಮುಂದೂಡಲಾಯಿತು. ಸದನವು ಪುನಃ ಮಧ್ಯಾಹ್ನ 3 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)

(ಸಭೆಯ ಕಲಾಪವು 3.00 ಗಂಟೆ 0.29 ನಿಮಿಷಕ್ಕೆ ಪ್ರಾರಂಭವಾಯಿತು. ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಅಧ್ಯಕ್ಷರು : ಈಗ ಶೂನ್ಯ ವೇಳೆ ಪ್ರಸ್ತಾಪ.

ಶ್ರೀ ಎನ್. ಸಂಪಂಗಿ : ಮಾನ್ಯ ಅಧ್ಯಕ್ಷರೆ, ನನಗೆ ಸಂಬಂಧಪಟ್ಟ ವಿಷಯಕ್ಕೆ ಉತ್ತರ ಬರಬೇಕು

ಅಧ್ಯಕ್ಷರು : ಶೂನ್ಯವೇಳೆ ಪ್ರಸ್ತಾಪ ಆದ ಮೇಲೆ ತಮಗೆ ಉತ್ತರ ಕೊಡಿಸುತ್ತೇನೆ. ಈಗ ಪ್ರಕಾಶ್ ಹುಕ್ಕೇರಿಯವರು ಕೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಉತ್ತರ ಕೊಡುತ್ತೇನೆಂದು ಹೇಳಿದ್ದೇನೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಮಾನ್ಯ ಅಧ್ಯಕ್ಷರಿಗೆ, ಮಾನ್ಯ ಲೋಕೋಪಯೋಗಿ ಸಚಿವರು ಇಲ್ಲ. ಅವರು ಶೂನ್ಯವೇಳೆ ವಿಷಯಕ್ಕೆ ಉತ್ತರ ಕೊಡಬೇಕು.

ಅಧ್ಯಕ್ಷರು : ಅವರು ಬರಲಿ.

ಶ್ರೀ ಹೆಚ್.ಡಿ. ರೇವಣ್ಣ : ನಮ್ಮ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಅರಣ್ಯ ಸಚಿವರನು ಕರೆಸಿರಿ.

ಅಧ್ಯಕ್ಷರು ; ಶ್ರೀ ಎಂ.ಟಿ. ಕೃಷ್ಣಪ್ಪನವರು ಕೇಳಿ.

ಶ್ರೀ ಎಸ್. ಸುರೇಶ್ ಕುಮಾರ್ : ಸಚಿವರು ಬರುತ್ತಿದ್ದಾರೆ. ಮೊದಲು ಖಾಶೆಂಪೂರ್‌ರವರು ಬರದ ಬಗ್ಗೆ ಮಾತನಾಡಲಿ. ಉತ್ತರ ಕೊಡಿಸಿಬಿಡೋಣ. ಇದನ್ನು ಮುಗಿಸಿಬಿಡೋಣ.

ಅಧ್ಯಕ್ಷರು : ಈಗ ರಾಮದಾಸ್‌ರವರು ಒಂದು ಸ್ಟೇಟ್‌ಮೆಂಟ್ ಮಾಡುತ್ತಾರೆ.

ಅಧ್ಯಕ್ಷರು : ಮಾನ್ಯ ರಾಮದಾಸ್‌ರವರ ಒಂದು statement ಕೊಡಬೇಕು.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಚಿಕ್ಕಣ್ಣನವರು ಇವತ್ತು ಬೆಳಿಗ್ಗೆ ಬಂದು ಮಾತನಾಡಿ ಒಂದು notice ಕೊಟ್ಟಿದ್ದಾರೆ. privilege ಬಗ್ಗೆ rise ಮಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು : ಇದೊಂದು clarification ಆಗಲಿ.

ಶ್ರೀ ಸಿದ್ದರಾಮಯ್ಯ : ಯಾವುದರ ಬಗ್ಗೆ ?

ಅಧ್ಯಕ್ಷರು : ನಿನ್ನೆ ನಡೆದ ಚರ್ಚೆಗೆ ಸಂಬಂಧಪಟ್ಟಂತೆ clarification ಕೊಡುತ್ತಾರೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ರಾಮದಾಸ್‌ರವರು ರಾಜೀನಾಮೆ ಕೊಡಬೇಕು. ಏಕೆಂದರೆ clarification ಎಂದರೆ ರಾಜಿನಾಮೆ ಅಷ್ಟೆ.